# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ವಿಜ್ಞಾನ ಭವನ, ನಂ. 24/ 2 ಮತ್ತು 24/ 3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070**
**ದೂರವಾಣಿ: 080–26718939, ಟೆಲಿಫ್ಯಾಕ್ಸ್: 26718959, ಇಮೈಲ್ :** krvp.info@gmail.com **ವೆಬ್‌ಸೈಟ್ :** www.krvp.org

ಕರಾವಿಪ ಸಂಖ್ಯೆ: 1.5/AGM/2015–16/ 22.09.2015

**ಸಾಮಾನ್ಯ ಅಂಚೆ**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ
ಸದಸ್ಯರು – ಕಾರ್ಯಕಾರಿ ಸಮಿತಿ,
ದಾನಿ ಸದಸ್ಯರು, ದಾನಿ ಸಂಘಸಂಸ್ಥೆಗಳ ಪ್ರತಿನಿಧಿಗಳು
ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳು, ಘಟಕ ಸಂಚಾಲಕರು
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ವಿಷಯ : 2014 – 15ನೇ ಸಾಲಿನ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 34ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಗೆ ದಿನಾಂಕ 18.10.2015 (ಭಾನುವಾರ) ರಂದು ಆಹ್ವಾನಿಸುವ ಕುರಿತು.**

***************

ಮಾನ್ಯರೆ,

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 2014–15ನೇ ಸಾಲಿನ 34ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ **18.10.2015ರ ಭಾನುವಾರದಂದು ಬೆಳಿಗ್ಗೆ 11–00 ಗಂಟೆಗೆ ಪ್ರೊ|| ಎಂ. ಎ. ಸೇತುರಾವ್ ಸಭಾಂಗಣ, ವಿಜ್ಞಾನಭವನ, ಕರಾವಿಪ** ಇಲ್ಲಿ ಕರೆಯಲಾಗಿದೆ. ತಾವು ಸಭೆಗೆ ಸಕಾಲದಲ್ಲಿ ಆಗಮಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಚಟುವಟಿಕೆಗಳ ಕುರಿತು ಪೂರಕ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ. **ಸಭೆಯಲ್ಲಿ ಭಾಗವಹಿಸುವ ಮಾನ್ಯ ಸದಸ್ಯರ ಪ್ರಯಾಣ ಭತ್ಯೆಯನ್ನು ಕರಾವಿಪ ಭರಿಸುವುದಿಲ್ಲ.**

**ಸಭೆಯ ಕಾರ್ಯಸೂಚಿ ಕೆಳಗಿನಂತಿದೆ:**

1. ಸ್ವಾಗತ : ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು – ಇವರಿಂದ
2. 2013–14ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗೆ ಹಾಗೂ ತತ್ಸಂಬಂಧ ಕೈಗೊಂಡ ಅನುಸರಣಾ ಕ್ರಮ ಕುರಿತು ಚರ್ಚೆ ಹಾಗೂ ಅನುಮೋದನೆ.
3. 2014–15ನೇ ಸಾಲಿನ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಾರ್ಷಿಕ ವರದಿ ಮಂಡನೆ – ಗೌರವ ಕಾರ್ಯದರ್ಶಿಯವರಿಂದ.
4. 2014–15 ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ.
5. 2014–15ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮಂಡನೆ – ಖಜಾಂಚಿಯವರಿಂದ.
6. 2014–15ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅನುಮೋದನೆ.
7. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಸಮಿತಿಗಳಿಂದ 2014–15ನೇ ಸಾಲಿನ ಕಾರ್ಯಚಟುವಟಿಕೆಗಳ ಲಿಖಿತ ವರದಿ ಮಂಡನೆ.
8. 2015–16ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ.
9. ಅಧ್ಯಕ್ಷರ ಅನುಮತಿಯೊಂದಿಗೆ ಇತರೆ ವಿಷಯಗಳು.
10. ವಂದನಾರ್ಪಣೆ.

ಮಾನ್ಯ ಸದಸ್ಯರು ಸಭೆಯಲ್ಲಿ ಮತ್ಯಾವುದೇ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಗೌರವ ಕಾರ್ಯದರ್ಶಿಯವರಿಗೆ ದಿನಾಂಕ **05.10.2015** ರೊಳಗೆ ಲಿಖಿತವಾಗಿ ಸಲ್ಲಿಸಬೇಕು.

ವಂದನೆಗಳು,

ಇತಿ ವಿಶ್ವಾಸದ,

(ಡಾ|| ವಸುಂಧರಾ ಭೂಪತಿ)
ಗೌರವ ಕಾರ್ಯದರ್ಶಿ

ಪ್ರತಿ: ಸೊಸೈಟಿಗಳ ನೋಂದಣಾಧಿಕಾರಿಗಳು, ಬೆಂಗಳೂರು ಇವರ ಮಾಹಿತಿಗಾಗಿ.

**ಸೂಚನೆ :**

1. **2014–15ನೇ ಸಾಲಿನ ಲೆಕ್ಕಪತ್ರ ವರದಿಯ ಪ್ರತಿಯನ್ನು 05.10.2015 ರ ನಂತರ ಕರಾವಿಪ ಕಛೇರಿಯಿಂದ ಖುದ್ದಾಗಿ ಪಡೆಯಬಹುದು.**
2. **ತಾವು ಸಭೆಗೆ ಬರುವಾಗ ಈ ಪತ್ರವನ್ನು ಕಡ್ಡಾಯವಾಗಿ ತರಬೇಕು.**
3. **ವಾರ್ಷಿಕ ಮಹಾ ಸಭೆಯ ಈ ಆಹ್ವಾನ ಪತ್ರಿಕೆ / ಸೂಚನಾ ಪತ್ರ ಹಾಗೂ ಕಳೆದ ಸಾಲಿನ (2013–2014) ಸರ್ವಸದಸ್ಯರ ಸಭೆಯ ಸಭೆಯ ನಡವಳಿ ಮತ್ತು ಅನುಪಾಲನಾ ವರದಿಯನ್ನು ಕರಾವಿಪ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ.**